ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**890**
ಸದಸ್ಯರ ಹೆಸರು	:	**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**
ಉತ್ತರಿಸುವ ಸಚಿವರು	:	**ಕಂದಾಯ ಸಚಿವರು**
ಉತ್ತರಿಸುವ ದಿನಾಂಕ	:	**10.03.2021**

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯ ಜಮ್ಮಾ ಬಾಣೆಯ ಪಹಣಿಯಲ್ಲಿರುವ ಕುಟುಂಬದ ಮುಖ್ಯಸ್ಥ (ಪಟ್ಟೇದಾರರ) ಹೆಸರು ತೆಗೆದುಹಾಕಲು ಜಾರಿಯಲ್ಲಿರುವ ಪ್ರಕ್ರಿಯೇ ಯಾವುದು;	ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 128 ಮತ್ತು 129ರ ವಿವರಣೆಯಂತೆ ಜಮ್ಮಾ ಬಾಣೆಯ [ಕಂದಾಯಕ್ಕೆ ಒಳಪಟ್ಟಂತಹ ಪಹಣಿಯಲ್ಲಿರುವ ಕುಟುಂಬದ ಮುಖ್ಯಸ್ಥ (ಖಾತೆದಾರರ/ಪಟ್ಟೇದಾರರ)] ಹೆಸರು ತೆಗೆದು ಅವರ ವಾರಸುದಾರರಿಗೆ ಖಾತೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 33 ಟಿಆರ್‌ಎಂ 2019(ಇ) ದಿನಾಂಕ:17.10.2020ರಲ್ಲಿ ಸೂಚಿಸಿರುವಂತೆ ಪೌತಿ ಖಾತೆ ಆಂದೋಲನ ನಡೆಸಿ ಮೃತ ಖಾತೆದಾರರ (ಪಟ್ಟೇದಾರರ) ಹೆಸರು ವಜಾಗೊಳಿಸಿ ಅವರ ವಾರಸುದಾರರಿಗೆ ಖಾತೆ ಬದಲಾವಣೆ ಬಗ್ಗೆ ಕ್ರಮವಹಿಸಲಾಗುತ್ತಿದೆ.
ಆ)	ಪೌತಿ ಖಾತೆ ಆಂದೋಲನದಲ್ಲಿ ಸದರಿ ಪ್ರಕ್ರಿಯೆಯನ್ನು ಸೇರಿಸಲಾಗಿದೆಯೇ;	ಹೌದು, ಕುಟುಂಬದ ಮುಖ್ಯಸ್ಥ (ಪಟ್ಟೇದಾರರು) ಪೌತಿಯಾದಲ್ಲಿ ಪಟ್ಟೇದಾರರ ವಾರಸುದಾರರ (ಕಲಂ 9ರಲ್ಲಿ ಮುಖ್ಯ ಸ್ವಾಧೀನದಾರರೊಂದಿಗೆ ಜಂಟಿಯಾಗಿದ್ದಲ್ಲಿ) ಹೆಸರಿಗೆ ಪೌತಿ ಖಾತೆ ಮಾಡಲು ಪೌತಿ ಖಾತೆ ಆಂದೋಲನ ಪ್ರಕ್ರಿಯೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಕಂಇ 52 ಟಿಆರ್‌ಎಂ 2021

(ಆರ್. ಅಶೋಕ)
ಕಂದಾಯ ಸಚಿವರು